ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1533

ಸದಸ್ಯರ ಹೆಸರು : ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 24.09.2021

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಕರಾವಳಿ ಹಾಗೂ ಮಲೆನಾಡು ಪ್ರದೇಶಗಳಲ್ಲಿ ಜಾರಿಗೆ ತಂದಿರುವ 'ಕರಾವಳಿ ಪ್ಯಾಕೇಜ್' ಕಾರ್ಯಕ್ರಮ ಯಾವ ಹಂತದಲ್ಲಿದೆ;	2019-20ನೇ ಸಾಲಿನಲ್ಲಿ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ಭತ್ತ ಬೆಳೆಯುವ ರೈತರಿಗೆ ಉತ್ತೇಜನ ನೀಡುವ ಸಲುವಾಗಿ 'ಕರಾವಳಿ ಪ್ಯಾಕೇಜ್' ಯೋಜನೆಯನ್ನು ಸರ್ಕಾರದಿಂದ ಘೋಷಿಸಿದ (ಹೊಸ ಯೋಜನೆ) ಹಿನ್ನಲೆಯಲ್ಲಿ ಭತ್ತದ ಬೆಳೆಗಾರರಿಗೆ ಪ್ರತಿ ಹೆ. ರೂ.7,500 ಗಳಂತೆ ಪ್ರೋತ್ಸಾಹ ಧನವನ್ನು ಸರ್ಕಾರದ ಆದೇಶದಂತೆ ಗರಿಷ್ಠ ಒಂದು ಹೆಕ್ಟೇರ್‌ಗೆ ಸೀಮಿತಗೊಳಿಸಿ ನೇರ ಸೌಲಭ್ಯ ವರ್ಗಾವಣೆಯ ಮೂಲಕ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. 2020-21ನೇ ಸಾಲಿನ ನಂತರ ಸದರಿ ಯೋಜನೆಯು ಚಾಲ್ತಿ ಯೋಜನೆಗಳಡಿಯಲ್ಲಿ ಮುಂದುವರೆಯದ ಕಾರಣ ಅನುಷ್ಠಾನಗೊಳಿಸಲಾಗಿರುವುದಿಲ್ಲ. ಮುಂದುವರೆದು, ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ (NFSM) ಅಕ್ಕಿ ಯೋಜನೆಯಡಿ ಬೆಳಗಾವಿ, ದಕ್ಷಿಣ ಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಉತ್ತರ ಕನ್ನಡ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಭತ್ತ ಬೆಳೆಯುವ ರೈತರಿಗೆ ಭತ್ತದ ಬೆಳೆಗೆ ಸಹಾಯಧನವನ್ನು ಕೇಂದ್ರ ಸರ್ಕಾರದ NFSM ಮಾರ್ಗಸೂಚಿಯಂತೆ 2021-22ನೇ ಸಾಲಿಗೆ ಜಾರಿಯಲ್ಲಿರುತ್ತದೆ.
ಆ.	ಈ ಕಾರ್ಯಕ್ರಮಕ್ಕೆ ಖರ್ಚಾಗಿರುವ ಅನುದಾನವೆಷ್ಟು?	2019-20ನೇ ಸಾಲಿನಲ್ಲಿ ಕರಾವಳಿ ಮತ್ತು ಮಲೆನಾಡು ಭಾಗದ ರೈತರಿಗೆ ಭತ್ತ ಬೆಳೆಯಲು ಪ್ರೇರಣೆ ನೀಡುವ ಉದ್ದೇಶದಿಂದ ಪ್ರತಿ ಹೆಕ್ಟೇರ್‌ಗೆ ರೂ.7,500 ಗಳಂತೆ ಈ ಯೋಜನೆಯಡಿ ರೂ. 2.258 ಕೋಟಿ ಪ್ರೋತ್ಸಾಹ ಧನವನ್ನು ನೀಡಲಾಗಿದೆ.

ಸಂಖ್ಯೆ: AGRI-AML/187/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು